<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 724

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 25-09-2020

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>2016-17 ರಿಂದ 2019-20ನೇ ಸಾಲಿನಲ್ಲಿ ಸಾರಿಗೆ ವ್ಯವಸ್ಥೆಯ ಸುಧಾರಣೆಗಾಗಿ ಕೇಂದ್ರ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನವೆಷ್ಟು; (ವರ್ಷವಾರು ಹಂಚಿಕೆ ಮಾಡಲಾಗಿರುವ ಅನುದಾನದ ಸಂಪೂರ್ಣ ವಿವರ ಒದಗಿಸುವುದು)</td><td>
ಸಾರಿಗೆ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:
<u>ಕ.ರಾ.ರ.ಸಾ.ನಿಗಮಕ್ಕೆ</u> 2019-2020ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ತುಮಕೂರು ಮತ್ತು ದಾವಣಗೆರೆ ಸ್ಮಾರ್ಟ್ ಸಿಟಿ ವತಿಯಿಂದ 2 ಯೋಜನೆಗಳು ಮಂಜೂರಾಗಿರುತ್ತವೆ. ಸದರಿ ಯೋಜನೆಗಳಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಭರಿಸುತ್ತಿದ್ದು ನಿಗಮಕ್ಕೆ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ.
(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಕಾರ್ಯಾಗಾರ ಮತ್ತು ಘಟಕ ನಿರ್ಮಾಣ</th><th>ಬಸ್ಸುಗಳು ಖರೀದಿಗಾಗಿ</th><th>ನಿರ್ಭಯ ಯೋಜನೆ</th><th>ಚಾಲನಾ ತರಬೇತಿ ಸಿಮಿಲೇಟರ್</th></tr>
<tr><td colspan="5">ಬೆಂ.ಮ.ಸಾ.ಸಂಸ್ಥೆ</td></tr>
<tr><td>2016-17</td><td>-</td><td>-</td><td>-</td><td>50.00</td></tr>
<tr><td>2017-18</td><td>748.00</td><td>3522.00</td><td>-</td><td>-</td></tr>
<tr><td>2018-19</td><td>-</td><td>-</td><td>3364.00</td><td>-</td></tr>
<tr><td>2019-20</td><td>-</td><td>-</td><td>-</td><td>-</td></tr>
</table>
<table>
<tr><td colspan="3">ವಾ.ಕ.ರ.ಸಾ.ಸಂಸ್ಥೆ<br>(ರೂ.ಕೋಟಿಗಳಲ್ಲಿ)</td></tr>
<tr><th>ವರ್ಷ</th><th>ವಿವರ</th><th>ಹಂಚಿಕೆಯಾದ ಅನುದಾನ</th></tr>
<tr><td>2016-17</td><td>-</td><td>-</td></tr>
<tr><td>2017-18</td><td>ಡ್ರೈವರ್ ಟ್ರೇನಿಂಗ್ ಸೆಂಟರ್ ಅಭಿವೃದ್ಧಿಗಾಗಿ</td><td>150</td></tr>
<tr><td>2018-19</td><td>-</td><td>-</td></tr>
<tr><td>2019-20</td><td>-</td><td>-</td></tr>
<tr><td colspan="3">ಈ ಪೈಕಿ ಪ್ರತಿ ತರಬೇತಿ ಕೇಂದ್ರಗಳಿಗೆ ರೂ. 0.50 ಕೋಟಿಯಂತೆ, ರೂ. 1.50 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.</td></tr>
</table>
<u>ಈ.ಕ.ರ.ಸಾ.ಸಂಸ್ಥೆಗೆ</u> 2016-17ರಿಂದ 2019-20ನೇ ಸಾಲಿನಲ್ಲಿ ಸಾರಿಗೆ ವ್ಯವಸ್ಥೆಯ ಸುಧಾರಣೆಗಾಗಿ, ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ.
</td></tr>
</table>

ಆ. ಈ ಅನುದಾನದಲ್ಲಿ ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ; ಈ ಯೋಜನೆಗಳಿಗೆ ಖರ್ಚು ಮಾಡಿರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)

<u>ಕ.ರಾ.ರ.ಸಾ.ನಿಗಮಕ್ಕೆ</u> 2019–2020ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಮಂಜೂರಾಗಿರುವ ತುಮಕೂರು ಬಸ್ ನಿಲ್ದಾಣವನ್ನು ಪುನರ್ ಅಭಿವೃದ್ಧಿಪಡಿಸುವುದು ಹಾಗೂ ದಾವಣಗೆರೆ ಬಸ್ ನಿಲ್ದಾಣವನ್ನು ನೂತನ ಮಾದರಿಯ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿಸುವ ಯೋಜನೆಗಳಿಗೆ ಕ್ರಮವಾಗಿ ರೂ.82.89 ಕೋಟಿಗಳು ಮತ್ತು ರೂ.120.00 ಕೋಟಿಗಳು ಮಂಜೂರಾಗಿದ್ದು; ಕ.ರಾ.ರ.ಸಾ.ನಿಗಮಕ್ಕೆ ಯಾವುದೇ ಅನುದಾನವನ್ನು ಹಂಚಿಕೆ ಮಾಡದಿರುವುದರಿಂದ, ನಿಗಮದಿಂದ ವೆಚ್ಚವನ್ನು ಮಾಡಿರುವುದಿಲ್ಲ.

<u>ಬೆಂ.ಮ.ಸಾ.ಸಂಸ್ಥೆ</u>

**I.** 2017–18ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಮುಂದುವರೆದ ಜೆಎನ್–ನರ್ಮ್ ಯೋಜನೆಯಡಿಯಲ್ಲಿ 5 ಬಸ್ ಘಟಕಗಳು ಹಾಗೂ 1 ಕಾರ್ಯಗಾರ ನಿರ್ಮಿಸಲು ರೂ.7.48 ಕೋಟಿಗಳ ಅನುದಾನವು ಬಿಡುಗಡೆಯಾಗಿದ್ದು, ಈ ಮೊತ್ತವನ್ನು ಪೂರ್ಣವಾಗಿ ಖರ್ಚು ಮಾಡಲಾಗಿರುತ್ತದೆ.

**II.** ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಜೆಎನ್‌ನರ್ಮ್–2 ಯೋಜನೆ ಅಡಿಯಲ್ಲಿ ಬೆಂ.ಮ.ಸಾ.ಸಂಸ್ಥೆಗೆ 500 ವಾಹನಗಳ (150 ಹವಾನಿಯಂತ್ರಿತ ಹಾಗೂ 350 ಮಿಡಿ ಹವಾನಿಯಂತ್ರಣ ರಹಿತ) ಖರೀದಿಗೆ ಮಂಜೂರಾತಿ ನೀಡಿರುತ್ತದೆ.

ಸದರಿ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯು ಈ ಕೆಳಕಂಡ 442 ಬಸ್ಸಗಳನ್ನು ಖರೀದಿಸಿರುತ್ತದೆ:

| ವರ್ಷ | ಬಸ್ಸುಗಳ ಮಾದರಿ | ಬಸ್ಸುಗಳ ಸಂಖ್ಯೆ |
|---|---|---|
| 2016–17 | ವೋಲ್ವೋ ಹವಾನಿಯಂತ್ರಿತ ವಾಹನಗಳು | 71 |
| 2017–18 | ವೋಲ್ವೋ ಹವಾನಿಯಂತ್ರಿತ ವಾಹನಗಳು | 79 |
| | ಟಾಟಾ ಮಿಡಿ ಬಸ್ಸುಗಳು | 292 |
| 2018–19 | ಯಾವುದು ಇರುವುದಿಲ್ಲ | |
| 2019–20 | | |
| | ಒಟ್ಟು | **442** |

ಬಸ್ಸುಗಳ ಖರೀದಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ರೂ.35.22 ಕೋಟಿ ಸಂಪೂರ್ಣವಾಗಿ ಬಳಸಲಾಗಿದೆ.

**III.** ನಿರ್ಭಯ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ:

1. ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ಕಾರ್ಯಕ್ರಮ:

ಅ) 10 ಲಘು ವಾಹನ (ಕಾರ್/ಜೀಪ್) ಖರೀದಿ

ಆ) ಲಘು ವಾಹನ ಚಾಲನಾ ತರಬೇತಿ

| | | |
|---|---|---|
| | | 2. ಲಿಂಗ ಸಂವೇದನಾ ತರಬೇತಿ:<br>ಅ) ಸಂಸ್ಥೆಯ 27000 ಸಿಬ್ಬಂದಿಗಳಿಗೆ ಲಿಂಗ ಸಂವೇದನಾ ತರಬೇತಿ<br>ಆ) ಲಿಂಗ ಸಂವೇದನಾ ತರಬೇತಿಯ ಮೌಲ್ಯಮಾಪನಕ್ಕಾಗಿ ವೆಬ್‌ಟೂಲ್ ಅಭಿವೃದ್ಧಿ ಮತ್ತು ಅಳವಡಿಕೆ<br>3. **ಸಂಸ್ಥೆಯ 3000 ಮಹಿಳಾ ಸಿಬ್ಬಂದಿಗಳಿಗೆ ಸ್ವರಕ್ಷಣಾ ತರಬೇತಿ (Self Defence)**<br>4. ಮಹಿಳಾ ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಗಾಗಿ 25 ಜೀಪ್ (ಗಸ್ತು ವಾಹನ) ಕಾರ್ಯಚರಣೆ<br>5. ಮಹಿಳಾ ಪ್ರಯಾಣಿಕರ ಸುರಕ್ಷತೆ ಬಗ್ಗೆ ಜಾಹೀರಾತು ಮತ್ತು ಜಾಗೃತಿ ಅಭಿಯಾನ<br>6. ಪ್ರಮುಖ 15 ಬಸ್ ನಿಲ್ದಾಣಗಳಲ್ಲಿ ಮಹಿಳಾ ವಿಶ್ರಾಂತಿ ಕೊಠಡಿಗಳ ನಿರ್ಮಾಣ.<br>7. ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿ<br>8. ಸಂಸ್ಥೆಯ 5000 ಬಸ್ಸುಗಳಲ್ಲಿ ಸಿ.ಸಿ.ಕ್ಯಾಮರಾ ಅಳವಡಿಕೆ<br>9. ಬಸ್ ನಿಲ್ದಾಣಗಳಲ್ಲಿ ಪ್ಯಾಸೆಂಜರ್ ಇನ್‌ಫಾರ್ಮೇಷನ್ ಡಿಸ್‌ಪ್ಲೇ ಅಳವಡಿಕೆ ನಿರ್ಭಯ ಯೋಜನೆಯಡಿ ಈವರೆಗೆ ಒಟ್ಟು ರೂ.7.85 ಕೋಟಿ ವೆಚ್ಚವಾಗಿರುತ್ತದೆ.<br>**IV.** ಚಾಲನಾ ಸಿಮ್ಯುಲೇಟರ್ ಅಳವಡಿಸಲು ಮೆ। ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ ಟೆಂಡರ್ ಆಗಿದ್ದು, ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದ್ದು, ಅನುದಾನದ ಮೊತ್ತ ರೂ.50.00 ಲಕ್ಷ ಬಾಕಿ ಉಳಿದಿರುತ್ತದೆ.<br>**ವಾ.ಕ.ರ.ಸಾ.ಸಂಸ್ಥೆ:**<br>ರೂ.1.50 ಕೋಟಿಗಳ ಅನುದಾನದಲ್ಲಿ ಕೇಂದ್ರ ಸರ್ಕಾರದ "Skill Development/Up gradation of Drivers and Mechanical Staffs in the Road Transport Sector (2017-18)" ಯೋಜನೆಯಡಿಯಲ್ಲಿ ಹುಬ್ಬಳ್ಳಿಯಲ್ಲಿರುವ ಪ್ರಾದೇಶಿಕ ತರಬೇತಿ ಕೇಂದ್ರವನ್ನು ಉನ್ನತೀಕರಿಸಲು ಮತ್ತು ಗದಗ ಹಾಗೂ ಬಾಗಲಕೋಟೆ ನಗರಗಳಲ್ಲಿ ನೂತನವಾಗಿ ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ. ಸದರಿ ಯೋಜನೆಗೆ ಈವರೆಗೆ ರೂ.1.43 ಕೋಟಿ ಮೊತ್ತ ವೆಚ್ಚ ಮಾಡಲಾಗಿದೆ. |
| ಇ) | ಈ ಯೋಜನೆಗಳ ಪೈಕಿ ಪೂರ್ಣಗೊಂಡಿರುವ ಹಾಗೂ ವಿಫಲಗೊಂಡಿರುವ ಯೋಜನಗಳೆಷ್ಟು; ಯೋಜನೆಗಳು ವಿಫಲಗೊಳ್ಳಲು ಕಾರಣವೇನು? | <u>ಕ.ರಾ.ರ.ಸಾ.ನಿಗಮ:</u> ತುಮಕೂರು ಬಸ್ ನಿಲ್ದಾಣವನ್ನು ಮರು ಅಭಿವೃದ್ಧಿಪಡಿಸುವ ಕಾಮಗಾರಿಯ ನಿರ್ಮಾಣ ಕೆಲಸವು ಪ್ರಗತಿಯಲ್ಲಿರುತ್ತದೆ.<br>ದಾವಣಗೆರೆ ಬಸ್ ನಿಲ್ದಾಣವನ್ನು ನೂತನ ಮಾದರಿಯ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿಸುವ ಯೋಜನೆಯ ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | <u>ಬೆಂ.ಮ.ಸಾ.ಸಂಸ್ಥೆ:</u> ಕೇಂದ್ರ ಸರ್ಕಾರದ ಮುಂದುವರೆದ ಜೆಎನ್-ನರ್ಮ್ ಯೋಜನೆಯಡಿಯಲ್ಲಿ ಎಂ.ಎಸ್.ಪಾಳ್ಯ, ಹುತ್ತನಹಳ್ಳಿ, ಪಿಲ್ಲಗಾನಹಳ್ಳಿ, ಭೈರತಿಗಳಲ್ಲಿ ಬಸ್ ಘಟಕ ನಿರ್ಮಿಸುವುದು ಹಾಗೂ ಚಲ್ಲಘಟ್ಟದಲ್ಲಿ ಕಾರ್ಯಾಗಾರ ನಿರ್ಮಿಸುವ ಯೋಜನೆಗಳನ್ನು ಪೂರ್ಣಗೊಳಿಸಿ,ಕಾರ್ಯಾಚರಣೆಗೊಳಿಸಲಾಗಿರುತ್ತದೆ. ಕಾವಲ್ ಹೊಸಹಳ್ಳಿಯಲ್ಲಿ ಬಸ್ ಘಟಕ ನಿರ್ಮಿಸುವ ಯೋಜನೆಯು ಪ್ರಗತಿಯಲ್ಲಿರುತ್ತದೆ.<br><br>2016-17 ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಜೆಎನ್‌ನರ್ಮ್-2 ಯೋಜನೆಯಡಿಯಲ್ಲಿ ಬೆಂ.ಮ.ಸಾ.ಸಂಸ್ಥೆಗೆ 500 ವಾಹನಗಳನ್ನು ಮಂಜೂರು ಮಾಡಿದ್ದು, ಸದರಿ ಯೋಜನೆಯಡಿಯಲ್ಲಿ 150 ವೋಲ್ವೋ ಹವಾನಿಯಂತ್ರಿತ ಹಾಗೂ 292 ಟಾಟಾ ಮಿಡಿ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಸರಬರಾಜು ಆದ ಟಾಟಾ ಮಿಡಿ ವಾಹನಗಳಲ್ಲಿ ತಾಂತ್ರಿಕ ದೋಷಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಉಳಿದ 58 ಮಿಡಿ ವಾಹನಗಳ ಖರೀದಿಯನ್ನು ತಡೆ ಹಿಡಿಯಲಾಗಿರುತ್ತದೆ.<br><br>ನಿರ್ಭಯ ಯೋಜನೆಯಡಿಯಲ್ಲಿನ ಕೆಲವು ಯೋಜನೆಗಳು ಪೂರ್ಣಗೊಂಡಿದ್ದು, ಬಾಕಿ ಉಳಿದಿರುವ ಯೋಜನೆಗಳು ಪ್ರಗತಿಯಲ್ಲಿರುತ್ತದೆ. ಚಾಲನಾ ಸಿಮ್ಯುಲೇಟರ್ ಅಳವಡಿಸಲು ಮೆ। ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ ಟೆಂಡರ್ ಆಗಿದ್ದು, ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 166 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು